ಕ್ರಮ ಸಂಖ್ಯೆ: 9

# ಕರ್ನಾಟಕ ವಿಧಾನ ಸಭೆ
## ಹದಿನಾಲ್ಕನೇ ವಿಧಾನಸಭೆ
## ಹದಿನಾಲ್ಕನೇ ಅಧಿವೇಶನ

## ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-27)**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ನ್ನು (2010ರ ಕರ್ನಾಟಕ ಅಧಿನಿಯಮ 26) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(3) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 6ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ರ (2010ರ ಕರ್ನಾಟಕ ಅಧಿನಿಯಮ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 6ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಹಾಗೂ ಕಾರ್ಯನಿರ್ವಾಹಕ ಸಮಿತಿಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**3. 7ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 7ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣಕ್ಕೆ ಈ ಮುಂದಿದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಉಪಾಧ್ಯಾಕ್ಷರು ಕಾರ್ಯನಿರ್ವಾಹಕ ಸಮಿತಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅಧ್ಯಕ್ಷರ ಗೈರುಹಾಜರಿಯಲ್ಲಿ, ಅಧ್ಯಕ್ಷರ ಅನುಮತಿಯೊಂದಿಗೆ ಉಪಾಧ್ಯಕ್ಷರು ಪರಿಷತ್ತಿನ ಸಭೆಯ ಅಧ್ಯಕ್ಷತೆಯನ್ನು ಸಹ ವಹಿಸತಕ್ಕದ್ದು."

(ii) (3)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಉಪಾಧ್ಯಕ್ಷರನ್ನು ಅಥವಾ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿದ ಯಾವೊಬ್ಬ ಇತರ ಸದಸ್ಯರನ್ನು ಅಥವಾ ಹುದ್ದೆಗೆ ಸೂಕ್ತವೆಂದು ಭಾವಿಸ ಬಹುದಾದ ಯಾವೊಬ್ಬ ಇತರ ವ್ಯಕ್ತಿಯನ್ನು 3ನೇ ಮತ್ತು 4ನೇ ಪ್ರಕರಣಗಳಿಗೆ ಒಳಪಟ್ಟು, ಸಾಮಾನ್ಯವಾಗಿ ಐದು ವರ್ಷಗಳ ಅವಧಿಗಾಗಿ ಅಥವಾ ಆತನು ಎಪ್ಪತ್ತು ವರ್ಷಗಳ ವಯಸ್ಸನ್ನು ತಲುಪುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಸರ್ಕಾರವು ನೇಮಕ ಮಾಡತಕ್ಕದ್ದು ಹಾಗೂ ಎರಡನೇ ಅವಧಿಯ ಮರುನೇಮಕಕ್ಕೆ ಆತನು ಅರ್ಹನಾಗಿರತಕ್ಕದ್ದಲ್ಲ:"

**4. 8ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 8ನೇ ಪ್ರಕರಣದ (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಸರ್ಕಾರವು ಕಾರ್ಯ ನಿರ್ವಾಹಕ ನಿರ್ದೇಶಕನನ್ನು ಸಾಮಾನ್ಯವಾಗಿ ಐದು ವರ್ಷಗಳ ಅವಧಿಗಾಗಿ ಅಥವಾ ಆತನು ಅರವತ್ತೈದು ವರ್ಷಗಳ ವಯಸ್ಸನ್ನು ತಲುಪುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕ ಮಾಡತಕ್ಕದ್ದು ಹಾಗೂ ಎರಡನೇ ಅವಧಿಗಾಗಿ ಮರು ನೇಮಕಕ್ಕೆ ಆತನು ಅರ್ಹನಾಗಿರತಕ್ಕದ್ದಲ್ಲ:"

**5. 11ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 11ನೇ ಪ್ರಕರಣದ (3)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಕಾರ್ಯನಿರ್ವಾಹಕ ನಿರ್ದೇಶಕನಿಗೆ ಸಂದಾಯ ಮಾಡುವ ಸಂಬಳಗಳು ಹಾಗೂ ಭತ್ಯೆಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಸಂದಾಯ ಮಾಡುವ ಸಂಬಳಗಳು ಹಾಗೂ ಭತ್ಯೆಗಳಿಗೆ ಸಮಾನವಾಗಿರತಕ್ಕದ್ದು. ಆತನು ನಿವೃತ್ತ ಅಧಿಕಾರಿಯಾಗಿದ್ದಲ್ಲಿ ಆತನ ಸಂಬಳವನ್ನು, ಆತನ ನಿವೃತ್ತಿ ವೇತನ ಮತ್ತು ಡಿಸಿಆರ್‌ಜಿಯಷ್ಟರಮಟ್ಟಿನ ತತ್ಸಮಾನ ಮೊತ್ತಕ್ಕೆ ಕಡಿಮೆಮಾಡತಕ್ಕದ್ದು. ಸೇವಾನಿರತ ಅಧಿಕಾರಿಯನ್ನು ನೇಮಕ ಮಾಡಿಕೊಂಡಿದ್ದಲ್ಲಿ, ಆತನು ತನ್ನ ಮೂಲ ಹುದ್ದೆಗೆ ಅಂಗೀಕಾರಾರ್ಹವಾಗುವ ಅವನದೇ ಸಂಬಳ ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು."

**6. 14ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 14ನೇ ಪ್ರಕರಣದ (i)ನೇ ಖಂಡದಲ್ಲಿ "ಅಧ್ಯಕ್ಷ" ಎಂಬ ಪದಕ್ಕೆ "ಕಾರ್ಯನಿರ್ವಾಹಕ ಸಮಿತಿಯ ಮುಖ್ಯಸ್ಥ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 16ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 16ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಅಧ್ಯಕ್ಷರ" ಎಂಬ ಪದಕ್ಕೆ "ಉಪಾಧ್ಯಕ್ಷರ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ನ್ನು ಈ ಮುಂದಿನವುಗಳಿಗಾಗಿ, ಎಂದರೆ:-

(i) ಪರಿಷತ್ತು ಮತ್ತು ಕಾರ್ಯನಿರ್ವಾಹಕ ಸಮಿತಿಯ ಸಭೆಗಳಿಗೆ ಸಂಬಂಧಿಸಿದ ಕೆಲವು ಉಪಬಂಧಗಳು ಅತಿಕ್ರಮಿಸುವುದನ್ನು ತೆಗೆದುಹಾಕಲು; ಮತ್ತು

(ii) ಉಪಾಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರ ನೇಮಕಾತಿ ಹಾಗೂ ಅವರ ವೇತನಗಳು ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಕೆಲವು ಉಪಬಂಧಗಳಲ್ಲಿನ ಅಸ್ಪಷ್ಟತೆಯನ್ನು ತೊಡೆದುಹಾಕಲು,

– ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಸವರಾಜ್ ರಾಯರೆಡ್ಡಿ**
ಉನ್ನತ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ರ (2010ರ ಕರ್ನಾಟಕ ಅಧಿನಿಯಮ 26) ಉದ್ಧೃತ ಭಾಗ

**XX XX XX**

6. **ಅಧ್ಯಕ್ಷ**.– (1) ಅಧ್ಯಕ್ಷರು, ಪರಿಷತ್ತಿನ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತಂತೆ ವರದಿಯನ್ನು ತರಿಸಿಕೊಳ್ಳಲು ಹಾಗೂ ಪರಿಷತ್ತಿನ ಕಾರ್ಯನಿರ್ವಹಣೆಯ ಸುಧಾರಣೆಗಾಗಿ ಸಲಹೆಗಳನ್ನು ನೀಡಲು ಹಕ್ಕನ್ನು ಹೊಂದಿರತಕ್ಕದ್ದು.

(2) ಅಧ್ಯಕ್ಷರು, ಪರಿಷತ್ತಿನ ಹಾಗೂ ಕಾರ್ಯನಿರ್ವಾಹಕ ಸಮಿತಿಯ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

**XX XX XX**

7. **ಉಪಾಧ್ಯಕ್ಷ**.– (1) ಉಪಾಧ್ಯಕ್ಷರು, ಅಧ್ಯಕ್ಷರ ಗೈರುಹಾಜರಿಯಲ್ಲಿ ಪರಿಷತ್ತಿನ ಅಥವಾ ಕಾರ್ಯ ನಿರ್ವಾಹಕ ಸಮಿತಿಯ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

**XX XX XX**

(3) ಉಪಾಧ್ಯಕ್ಷರನ್ನು ಅಥವಾ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿದ ಯಾವೊಬ್ಬ ಇತರ ಸದಸ್ಯರನ್ನು, ಸಾಮಾನ್ಯವಾಗಿ ಐದು ವರ್ಷಗಳ ಅವಧಿಗಾಗಿ ಸರ್ಕಾರವು ನೇಮಕ ಮಾಡತಕ್ಕದ್ದು ಹಾಗೂ ಎರಡನೇ ಅವಧಿಯ ಮರುನೇಮಕಕ್ಕೆ ಇವರು ಅರ್ಹರಾಗಿರತಕ್ಕದ್ದಲ್ಲ:

ಪರಂತು, ಎಪ್ಪತ್ತು ವರ್ಷಗಳ ವಯಸ್ಸು ಆಗಿರದ ವ್ಯಕ್ತಿಯು, ಉಪಾಧ್ಯಕ್ಷರಾಗಿ ನೇಮಕವಾಗಲು ಅರ್ಹರಾಗಿರತಕ್ಕದ್ದು.

**XX XX XX**

8. **ಕಾರ್ಯ ನಿರ್ವಾಹಕ ನಿರ್ದೇಶಕ**.– (1) **XX XX XX**

(2) ಸರ್ಕಾರವು ಕಾರ್ಯ ನಿರ್ವಾಹಕ ನಿರ್ದೇಶಕನನ್ನು ಸಾಮಾನ್ಯವಾಗಿ ಐದು ವರ್ಷಗಳ ಅವಧಿಗಾಗಿ ನೇಮಕ ಮಾಡತಕ್ಕದ್ದು ಹಾಗೂ ಎರಡನೇ ಅವಧಿಗಾಗಿ ಮರು ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಅರವತ್ತೈದು ವರ್ಷಗಳ ವಯಸ್ಸು ಆಗಿರದ ವ್ಯಕ್ತಿಯು, ಕಾರ್ಯನಿರ್ವಾಹಕ ನಿರ್ದೇಶಕನಾಗಿ ನೇಮಕವಾಗಲು ಅರ್ಹನಾಗಿರುತ್ತಾನೆ.

**XX XX XX**

**11. ಉಪಾಧ್ಯಕ್ಷ, ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಸದಸ್ಯರ ನಿಬಂಧನೆಗಳು ಮತ್ತು ಷರತ್ತುಗಳು.–** (1)

**XX XX XX**

(3) ಕಾರ್ಯನಿರ್ವಾಹಕ ನಿರ್ದೇಶಕನಿಗೆ ಸಂದಾಯ ಮಾಡುವ ಸಂಬಳಗಳು ಹಾಗೂ ಭತ್ಯೆಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಸಂದಾಯ ಮಾಡುವ ಸಂಬಳಗಳು ಹಾಗೂ ಭತ್ಯೆಗಳಿಗೆ ಸಮಾನವಾಗಿರತಕ್ಕದ್ದು. ಆತನು ನಿವೃತ್ತ ಅಧಿಕಾರಿಯಾಗಿದ್ದಲ್ಲಿ ಆತನ ಸಂಬಳವನ್ನು, ಆತನ ನಿವೃತ್ತಿ ವೇತನ ಮತ್ತು ಡಿಸಿಆರ್‌ಜಿಯಷ್ಟರ ಮಟ್ಟಿಗೆ ಕಡಿಮೆಮಾಡತಕ್ಕದ್ದು. ಸೇವಾನಿರತ ಅಧಿಕಾರಿಯನ್ನು ನೇಮಕ ಮಾಡಿಕೊಂಡಿದ್ದಲ್ಲಿ, ಆತನು ಯಾವುದೇ ಸಂಬಳ ಅಥವಾ ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**XX XX XX**

**14. ಕಾರ್ಯನಿರ್ವಾಹಕ ಸಮಿತಿ.–** ಪರಿಷತ್ತಿಗಾಗಿ ಪರಿಷತ್ತಿನ ಈ ಮುಂದಿನ ಸದಸ್ಯರುಗಳನ್ನು ಒಳಗೊಂಡ ಒಂದು ಕಾರ್ಯನಿರ್ವಾಹಕ ಸಮಿತಿಯು ಇರತಕ್ಕದ್ದು ಎಂದರೆ.–

(i) ಪರಿಷತ್ತಿನ ಉಪಾಧ್ಯಕ್ಷ ಅಧ್ಯಕ್ಷ

**XX XX XX**

**16. ಸಭೆಗಳು:–** (1) ಕಾರ್ಯನಿರ್ವಾಹಕ ಸಮಿತಿಯ ಸಭೆಗಳನ್ನು ಅಧ್ಯಕ್ಷರ ಸಲಹೆಯ ಮೇರೆಗೆ ಕಾರ್ಯನಿರ್ವಾಹಕ ನಿರ್ದೇಶಕರು ನಡೆಸತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , –ಪ್ರತಿಗಳು 1000, 13ನೇ ಜೂನ್ 2017

Serial No : 9

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

# THE KARNATAKA STATE HIGHER EDUCATION COUNCIL (AMENDMENT) BILL, 2017

**(L.A. Bill No. 27 of 2017)**

A Bill to amend the Karnataka State Higher Education Council Act, 2010.

Whereas it is expedient to amend the Karnataka State Higher Education Council Act, 2010 (Karnataka Act 26 of 2010) for the purposes hereinafter appearing;

Be it enacted by the Karnataka State Legislature in sixty-eighth year of the Republic of India as follows:

**1. Short title and commencement.-** (1) This Act may be called the Karnataka State Higher Education Council (Amendment) Act 2017.

(2) It shall come into force at once.

**2. Amendment of section 6.-** In the Karnataka State Higher Education Council Act, 2010 (Karnataka Act 26 of 2010) (hereinafter referred to as the principal Act), in section 6, in sub-section (2), the words "and the Executive Committee" shall be omitted.

**3. Amendment of section 7.-** In section 7 of the principal Act,-

(i) for sub-section (1), the following shall be substituted, namely:-

" (1) The Vice-Chairman shall preside over the meeting of the Executive Committee. The Vice-Chairman in absence of the Chairman shall also preside over the meetings of the Council with permission of the Chairman."

(ii) for sub-section (3), the following shall be substituted, namely:-

"(3) The Vice-Chairman or any other member other than an ex-officio member or any other person subject to sections 3 and 4 is deemed fit for the post shall be appointed by the Government ordinarily for a term of five years or until he attains the age of seventy years whichever is earlier and he shall not be eligible for reappointment for a second term.

**4. Amendment of section 8.-** In section 8 of the principal Act, for sub-section (2), the following shall be substituted, namely:-

"(2) The Executive Director shall be appointed by the Government ordinarily for a term of five years or until he attains the age of sixty five years whichever is earlier and he shall not be eligible for reappointment for a second term."

**5. Amendment of section 11.-** In section 11 of the principal Act, for sub-section (3), the following shall be substituted, namely:-

"(3) The salaries and allowances payable to the Executive Director shall be the same as that of a Principal Secretary to the Government, if he is a retired officer, and his pay shall be reduced by an amount equivalent to that of his pension and DCRG. If a serving officer is appointed, he is entitle to draw his own pay and allowances admissible to his substantive post."

**6. Amendment of section 14.-** In section 14 of the principal Act, in clause (i) for the word "Chairman" the words "Head of the Executive Committee" shall be substituted.

**7. Amendment of section 16.-** In section 16 of the principal Act, in sub-section (1), for the word "Chairman", the words "Vice-Chairman" shall be substituted.

## STATEMENT OF OBJECTS AND REASONS

It is considered necessary to amend the Karnataka State Higher Education Council Act, 2010 to,-

(i) remove overlapping of certain provisions thereof relating to the meetings of the Council and Executive Committee; and

(ii) expunge ambiguity in some provisions pertaining to appointment of the Vice-Chairman and Executive Director and their salaries and allowances.

Hence the Bill.

## FINANCIAL MEMORANDUM

There is no extra expenditure involved in the proposed Legislative Measure.

**BASAVARAJ RAYAREDDI**
Minister for HIgher Education

**S. Murthy**
Secretary (I/c)
Karnataka Legislative Assembly

**ANNEXURE**

**THE KARNATAKA STATE HIGHER EDUCATION COUNCIL ACT, 2010**
**(KARNATAKA ACT NO. 26 OF 2010)**

**XXX XXX XXX**

**6. The Chairman.-**

**XXX XXX XXX**

(2) The Chairman shall preside over the meetings of the Council and the Executive Committee

**XXX XXX XXX**

**7. The Vice-Chairman.-** (1) The Vice-Chairman shall preside over the meetings of the Council or the Executive Committee in the absence of the Chairman.

**XXX XXX XXX**

(3) The Vice- Chairman or any member other than an ex-officio member shall be appointed by the Government ordinarily for a term of five years and shall not be eligible for reappointment for a second term:

Provided that a person who has not attained the age of seventy years shall be eligible to be appointed as the Vice-Chairman.

**XXX XXX XXX**

**8. The Executive Director.-**

**XXX XXX XXX**

(2) The Executive Director shall be appointed by the Government ordinarily for a term of five years and shall not be eligible for reappointment for a second term: Provided that a person who has not attained the age of sixty-five years shall be eligible to be appointed as the Executive Director.

**XXX** **XXX** **XXX**

**11. Terms and conditions of the Vice-Chairman, the Executive Director and members.**-

**XXX** **XXX** **XXX**

(1) The salaries and allowances payable to the Executive Director shall be the same as that of a Principal Secretary to the Government, if he is a retired officer, and his pay shall be reduced to that of his pension and DCRG. If a serving officer is appointed is not entitled for any salary or allowances.

**XXX** **XXX** **XXX**

**14. The Executive Committee.-** There shall be an Executive Committee for the Council which shall consist of the following members, namely:-

(i) the Vice-Chairman of the council; - Chairman

**XXX** **XXX** **XXX**

**16. Meetings.-** (1) The meetings of the Executive Committee shall be convened by the Executive Director on the advice of the Chairman.

**XXX** **XXX** **XXX**

Government Press, Vikasa Soudha Unit, Bengaluru 13th June, 2017 P7, W.D., Copies 1000